# ಕನ್ನಡ ವೃತ್ತಿ ರಂಗಭೂಮಿ

**ಡಾ.ಲಕ್ಷ್ಮೀನಾರಾಯಣ ಎ.ವಿ**
**ಸಹ ಪ್ರಾಧ್ಯಾಪಕರು**
**ಸ.ಪ್ರ.ದ.ಕಾ ಕೆಂಗೇರಿ**
Corresponding Author:lakshminarayan2453@gmail.com

ನಾಟಕ ಆಡುವುದನ್ನೇ ವೃತ್ತಿಯನ್ನಾಗಿ ಮಾಡಿಕೊಂಡು ನಾಟಕ ಮಂಡಳಿಗಳನ್ನು ಕಟ್ಟಿ ಆ ಮೂಲಕ ನಾಟಕ ಪ್ರದರ್ಶನ ಮಾಡುವ ಪ್ರಕಾರವನ್ನು 'ವೃತ್ತಿ ರಂಗಭೂಮಿ' ಎಂದು ಕರೆಯುತ್ತಾರೆ. ಈ ರಂಗಭೂಮಿಯ ಪ್ರಮುಖ ಉದ್ದೇಶವೇ ನಾಟಕ ಪ್ರದರ್ಶನದ ಮೂಲಕ ಹಣವನ್ನು ಸಂಪಾದನೆ ಮಡುವುದು. ಭಾರತದ ಪರಂಪರೆಯನ್ನು ಅವಲೋಕಿಸಿದರೆ ಮೊದಮೊದಲು ನಾಟಕಗಳನ್ನು ತಮ್ಮ ಸಂತೋಷಕ್ಕಾಗಿ ಆಡುತ್ತಿದ್ದರು ಎಂಬುದನ್ನು ತಿಳಿಯಬಹುದು. ನಂತರದಲ್ಲಿ ನಮ್ಮ ಜೀವನ ಪದ್ಧತಿಯೂ ಬದಲಾಯಿತು ಮತ್ತು ಪಾಶ್ಚಾತ್ಯರ ಪ್ರಭಾವವೂ ನಮ್ಮ ಮೇಲೆ ಉಂಟಾದುದರಿಂದ ರಂಗಪರಂಪರೆಯಲ್ಲಿ ಬದಲಾವಣೆ ಆಗಿದೆ. ಬಂಡವಾಳ ಹೂಡಿ ಉದ್ಯಮದಂತೆ 'ನಾಟಕ ಮಂಡಳಿ'ಯನ್ನು ಕಟ್ಟಿ ಬೆಳೆಸಿದ ಅನೇಕ ಮಹನೀಯರನ್ನು ನಾವಿಂದು ಕಾಣಬಹುದು. "ಭಾರತದಲ್ಲಿ ಮೊದಲನೆಯ ವೃತ್ತಿ ನಾಟಕ ಮಂಡಳಿ ಕಾಣಿಸಿಕೊಂಡುದು 1775-76ರಲ್ಲಿ: ಕಲ್ಕತ್ತೆಯಲ್ಲಿ. ಆಂಗ್ಲನಾಟಕದ ಪ್ರಭಾವದಿಂದಾಗಿ, ಕಲ್ಕತ್ತೆಯ ಶ್ರೀಮಂತ ಜಮೀನುದಾರರು ವಂತಿಗೆ ಕೂಡಿಸಿ ರಂಗಮಂದಿರವೊಂದನ್ನು ಪುನರಚಿಸಿದ ಮೇಲೆ ನಮ್ಮ ದೇಶದ ವೃತ್ತಿ ನಾಟಕ ರಂಗಮಂದಿರ ಹುಟ್ಟಿತೆನ್ನಬೇಕು. ಮೊದಮೊದಲು ನಾಟಕಗಳಿಗೆ ಮುಕ್ತದ್ವಾರವಿದ್ದುದೇನೆಂದರೆ ವಂತಿಗೆ ಕೊಟ್ಟ ಶ್ರೀಮಂತರಿಗೆ ಹಾಗೂ ಅವರ ಕುಟುಂಬ ಬಳಗಕ್ಕೆ ಮಾತ್ರ. ಆದರೆ ಕಾಲಕ್ರಮೇಣ, ನಟರಿಗೆ ಸಂಬಳ ಕೊಡುವ ಪರಿಪಾಠವೂ, ಕೇಳಿದವರಿಗೆಲ್ಲಾ ಟಿಕೆಟ್ಟುಗಳನ್ನು ಮಾರುವ ವ್ಯವಸ್ಥೆಯೂ ಆಗಿ 'ರಾಷ್ಟ್ರೀಯ ನಾಟಕ ರಂಗ'ವು ಈ ರೀತಿ ಜನ್ಮ ತಾಳಿತು"[1].

ಬ್ರಿಟೀಷರ ಆಡಳಿತ ವ್ಯಾಪ್ತಿಯಲ್ಲಿದ್ದ ಬಂಗಾಳದ ಕಲ್ಕತ್ತಾ ನಗರ ಮತ್ತು ಮಹಾರಾಷ್ಟ್ರದ ಮುಂಬೈ ನಗರಗಳಲ್ಲಿ ಪಾಶ್ಚಾತ್ಯ ನಾಗರಿಕತೆಯ ವ್ಯಾಮೋಹ ಹೆಚ್ಚಾಗಿತ್ತು. ಇದು ರಂಗಭೂಮಿಯ ಮೇಲೂ ಸಹ ಪ್ರಭಾವ ಬೀರಿತು. ಹಾಗಾಗಿ ನಾಟಕದಲ್ಲಿ ಹಲವು ಹೊಸ ಹೊಸ ತಂತ್ರಗಳು ಕಾಣಿಸಿಕೊಂಡವು. ಪೌರಾಣಿಕ ವಸ್ತುಗಳೆ ಪ್ರಮುಖವಾಗಿದ್ದ ನಾಟಕಗಳ ಬದಲಾಗಿ ಐತಿಹಾಸಿಕ ಹಾಗೂ ಸಾಮಾಜಿಕ ನಾಟಕಗಳನ್ನು ಪ್ರದರ್ಶನಕ್ಕೆ ಸಿದ್ದಪಡಿಸಿದರು. ಅಷ್ಟೇ ಅಲ್ಲದೆ ಷೇಕ್ಸ್‌ಪಿಯರ್ ಮುಂತಾದ ಇಂಗ್ಲಿಷ್ ನಾಟಕಕಾರರ ನಾಟಕಗಳ ರೂಪಾಂತರಗಳನ್ನು ರಂಗಭೂಮಿಗೆ ತಂದರು.

ಕನ್ನಡ ನಾಡಿನಲ್ಲಿ ವೃತ್ತಿ ರಂಗಭೂಮಿ ಅಸ್ತಿತ್ವಕ್ಕೆ ಬರುವುದಕ್ಕಿಂತ ಮೊದಲು ಜನಪದ ರಂಗಭೂಮಿ ಬಹಳ ಪ್ರಸಿದ್ಧವಾಗಿತ್ತು. ಮರಾಠಿ ನಾಟಕಗಳ ರಚನೆ ಹಾಗೂ ಪ್ರದರ್ಶನಕ್ಕೆ ನಮ್ಮ ಜನಪದ ರಂಗಭೂಮಿಯೇ ಪ್ರೇರಣೆ ಹಾಗೂ ಪ್ರಭಾವಗಳನ್ನೊದಗಿಸಿತು. "ಕನ್ನಡ ಕರಾವಳಿಯ ಭಾಗವತರಾಟಗಳನ್ನು ನೋಡಿ ಸ್ಫೂರ್ತಿಗೊಂಡು ಸಾಂಗ್ಲಿ ಸಂಸ್ಥಾನದ ಆಶ್ರಯದಲ್ಲಿದ್ದ ಚತುರ ಕರಣಿಕನಾದ ವಿಷ್ಣುಪಂತಭಾ□□ ಎಂಬಾತ ಕನ್ನಡ ಯಕ್ಷಗಾನದ ನಡೆಯಲ್ಲಿ ಮರಾಠಿ ನಾಟಕಗಳನ್ನು ರಚಿಸಿ ಆಡಲು ತೊಡಗಿದ. ಮುಂದೆ ನಾಲ್ಕಾರು ವರ್ಷಗಳಲ್ಲಿ ಭಾವೆಯ ನಾಟಕ ಬೊಂಬಾಯಿನಲ್ಲಿ ದೊಡ್ಡ ಆಂದೋಲನವನ್ನೇ ಮಾಡಿತು. ಜನತೆಯ ಪ್ರೋತ್ಸಾಹ ದೊರೆಯಲು ಪ್ರಾರಂಭಿಸಿದ ಮೇಲೆ ಭಾವೆಯವರ ನಾಟಕ ಮಂಡಳಿಯು ವೃತ್ತಿ ಮಂಡಳಿಯಾಗಿ ಮಾರ್ಪಟ್ಟು 'ಸಾಂಗ್ಲೀಕರ್ ಸಂಗೀತ ನಾಟಕ ಮಂಡಳಿ' ಎಂಬ ಹೆಸರಿನಿಂದ ಮಹಾರಾಷ್ಟ್ರ ಹಾಗೂ ಉತ್ತರ ಕರ್ನಾಟಕದ ಮುಖ್ಯ ಪಟ್ಟಣಗಳಲ್ಲಿ ನಾಟಕಗಳನ್ನಾಡುತ್ತಾ ಪ್ರವಾಸ ಮಾಡತೊಡಗಿತು"[2]. ಹೀಗೆ ಯಕ್ಷಗಾನದಿಂದ ಪ್ರಭಾವಿತವಾಗಿ ರಚಿತವಾದ ಮರಾಠಿ ನಾಟಕಗಳು ಉತ್ತರ ಕರ್ನಾಟಕದ ಪ್ರಮುಖ ನಗರಗಳಲ್ಲಿ ಹೆಚ್ಚೆಚ್ಚು ಪ್ರದರ್ಶನಗೊಂಡು ಜನರನ್ನು ರಂಗಮಂದಿರದ ಕಡೆಗೆ ಬರುವಂತೆ ಮಾಡಿದವು. ಹೊಸ ರೀತಿಯ ಸಂಗೀತ, ವಿಶೇಷವಾದ ವೇಷಭೂಷಣ, ಧ್ವನಿ, ಬೆಳಕುಗಳ ಹೊಸತನಗಳು ಕನ್ನಡಿಗರಿಗೆ ಬಹಳ ಇಷ್ಟವಾದವು. ಬರಬರುತ್ತಾ ಯಕ್ಷಗಾನದ ಅಲೆ ಕಡಿಮೆಯಾಯಿತು. ಮರಾಠಿ ನಾಟಕಗಳ ಕಾವು ಹೆಚ್ಚಾಯಿತು. ಇಂತಹ ಸಂದರ್ಭದಲ್ಲಿ ಈ ರೀತಿಯಲ್ಲಿ ಮರಾಠಿ ನಾಟಕಗಳು ಕನ್ನಡ ನಾಡಿನಲ್ಲಿ ಜಯಪ್ರಿಯವಾದರೆ "ಕನ್ನಡ ರಂಗಭೂಮಿ"ಯ ಅಸ್ತಿತ್ವ ಏನಾಗಬಹುದು ಎಂಬುದನ್ನು ಹಲವರು ಚಿಂತಿಸಿದರು. ಅಷ್ಟೇ ಅಲ್ಲದೇ ಹೇಗಾದರು ಮಾಡಿ ಕನ್ನಡ ರಂಗಭೂಮಿಗೆ ಪುನಶ್ಚೇತನ ನೀಡಲೇಬೇಕು ಎಂದು ಜೀರ್ಮಾನಿಸಿದರು. ಆಗ ಮುಂದಾಳಾಗಿ ನಿಂತು 'ಕನ್ನಡ ರಂಗಭೂಮಿ'ಗೆ ತನ್ನದೇ ಆದ ವೈವಿಧ್ಯತೆ ಇದೆ ಎಂದು

ತೋರಿಸಿದವರೆ ಶಾಂತಕವಿಗಳು, 'ಕನ್ನಡ ನಾಟಕದ ಪ್ರಥಮ ಗುರು' ಎಂದು ಕನ್ನಡ ಜನ ಪ್ರೀತಿಯಿಂದ ಕರೆದ ಶಾಂತಕವಿಗಳ ಪ್ರೋತ್ಸಾಹದಿಂದ ಗದುಗಿನ ಶ್ರೀಮಂತ ಉಮಚಗಿ ಲಚ್ಚಪ್ಪ ನಾಯಕ ಎನ್ನುವವರು "ಶ್ರೀ ವೀರನಾರಾಯಣ ಪ್ರಸಾದಿತ ಕೃತಪುರ ನಾಟಕ ಮಂಡಳಿ"ಯನ್ನು ಸ್ಥಾಪಿಸಿದರು. "ಈ ನಾಟಕ ಮಂಡಳಿಯೆ ಉತ್ತರ ಕರ್ನಾಟಕದ ಪ್ರಥಮ ವೃತ್ತಿ ನಾಟಕ ಸಂಸ್ಥೆಯಾಗಿದ್ದು, ಶಾಂತಕವಿಗಳು ಈ ಸಂಸ್ಥೆಗಾಗಿ ನಾಟಕಗಳನ್ನು ಬರೆಯತೊಡಗಿದರು. 'ಉಷಾಹರಣ' ಅವರ ಮೊದಲ ನಾಟಕ. ಉಷಾಹರಣವಲ್ಲದೆ 'ಶ್ರೀಯಾಳ ಸತ್ವ ಪರೀಕ್ಷೆ', 'ಸಂದೋಪಸುಂದವಧ', 'ವತ್ಸಲಾಹರಣ', 'ಕೀಚಕವಧ', 'ಸುಧನ್ವ ವಧ', 'ಸೀತಾರಣ್ಯ ಪ್ರವೇಶ', ಮುಂತಾದ ನಾಟಕಗಳನ್ನು ಅವರಿಗಾಗಿ ಶಾಂತಕವಿಗಳು ರಚಿಸಿಕೊಟ್ಟರು. ಅಂದಿನ ಮರಾಠಿ ಮತ್ತು ಕನ್ನಡ ವೃತ್ತಪತ್ರಿಕೆಗಳು ಈ ನಾಟಕಗಳನ್ನು ವಿಶೇಷವಾಗಿ ಹೊಗಳಿ ಪ್ರಚಾರ ಮಾಡಿದವು. ಶಾಂತಕವಿಗಳು ಗದುಗಿನ ಕೃತಪುರ ಮಂಡಳಿಯ ನಾಟಕ ಮಾಸ್ತರರೂ ಆಗಿದ್ದರು. ಕನ್ನಡವನ್ನು ಕುರಿತ ಅತೀವ ನಿಷ್ಠೆ ಅವರ ಸಾಹಿತ್ಯದ ಪ್ರೇರಣೆಯಾಗಿದ್ದು ಒಟ್ಟು ಮುವ್ವತ್ತೈದು ನಾಟಕಗಳನ್ನೂ, ಕಾವ್ಯ, ಕೀರ್ತನಶಾಸ್ತ್ರ ಮುಂತಾದ ಇತರ ಹಲವು ಗ್ರಂಥಗಳನ್ನು ಅವರು ರಚಿಸಿದ್ದಾರೆ. ಉತ್ತರ ಕರ್ನಾಟಕದ ವೃತ್ತಿ ರಂಗಭೂಮಿಯಂತೂ ಶಾಂತಕವಿಗಳ ಪ್ರಯತ್ನದಿಂದ ಉತ್ತಮ ಪ್ರಗತಿಯನ್ನು ಸಾಧಿಸಿತು"[3]. ಹೀಗೆ ಶಾಂತಕವಿಗಳ ಕಟ್ಟುನಿಟ್ಟಿನ ಅಭ್ಯಾಸ ಕ್ರಮ ಹಾಗೂ ಶಿಸ್ತಿನಿಂದ ಕೃತಪುರ ನಾಟಕ ಕಂಪನಿಯ ನಾಟಕಗಳು ಹೆಚ್ಚು ಜನಪ್ರಿಯವಾದವು. ಇವರ ನಾಟಕಗಳನ್ನು ನೋಡಿ ನಿಬ್ಬೆರಗಾದ ಜನ ಹೇಗೆ ಹಾಡಿ ಕುಣಿದರು ಎಂಬುದನ್ನು ಶಾಂತಕವಿಗಳು ಹೀಗೆ ಹೇಳಿದ್ದಾರೆ.

**ಚೆಲುವ ರೂಪಗಳಿಹವು ಚೆಂದ ಬೆಸಗಳಿಹವು**
**ಲಲಿತ ಭಾಷಣವಿಹುದು ತಿಳೀಗಾನವೂ ಇಹುದು**
**ಬೆಳೆದ ಭಕುತರ ಮಹಿಮೆಯಿರಬಹುದು ಹರಿಹರರಗಾಥಲೀಲಾಮಾಯೆಯು**
**ಭಳಿರೆಯಿಹಪರವೆಮಗೆ ಸಾಧಿಸುವವೊಂದಿರುಳ್**
**ಗಳಿಯ ದಿವರಾಡುವರೆ ನೋಡುವೆವೆಯೆಂದು ಜನ**
**ರುಲಿಗುಮಿದು ಮಬ್ಬೊ ಮಮತೋ ಮೆಚ್ಚ ಕನ್ನಡ ಭಾಷೆಯಭಿಮಾನದುಕ್ಕೊ**

ಕನ್ನಡ ನಾಡು ಹಾಗೂ ನುಡಿಯ ಬಗ್ಗೆ ಅಪಾರವಾದ ಪ್ರೀತಿ, ಅಭಿಮಾನ ಹೊಂದಿದ್ದ ಶಾಂತಕವಿಗಳು ಹಲವಾರು ಅತ್ಯುತ್ತಮ ನಾಟಕಗಳನ್ನು ರಚಿಸಿ, ನಟನೆಯ ಶಿಕ್ಷಣವನ್ನು ಉಣಬಡಿಸಿ, ನಾಟಕ ಮಂಡಳಿಯ ಶ್ರೇಷ್ಠ ಸಂಘಟಕರಾಗಿ ದುಡಿದು ಉತ್ತರ ಕರ್ನಾಟಕದ ವೃತ್ತಿ ರಂಗಭೂಮಿಯ ಉದಯಕ್ಕೆ ಕಾರಣಕರ್ತರಾದ ಇವರು 'ಕರ್ನಾಟಕ ನಾಟಕ ಪಿತಾಮಹ' ಎಂಬ ಪ್ರಶಸ್ತಿಗೆ ಅರ್ಹರು ಎಂಬ ಡಾ.ಹೆಚ್.ಕೆ.ರಂಗನಾಥ್‌ರವರ ಮಾತು ನೂರಕ್ಕೆ ನೂರರಷ್ಟು ಒಪ್ಪುತ್ತದೆ.

ಉತ್ತರ ಕರ್ನಾಟಕದ ಹಲವು ಪ್ರಮುಖ ನಗರಗಳಲ್ಲಿ ಮರಾಠಿ ನಾಟಕಗಳು ಜನರನ್ನು ತಮ್ಮ ಅಭಿನಯದಿಂದ ಬೆರಗುಗೊಳಿಸಿದಂತೆಯೆ ಮೈಸೂರು ನಗರಕ್ಕೂ ಆಗಮಿಸಿ ಪ್ರೇಕ್ಷಕರನ್ನು ರಂಜಿಸಿದವು. ಅಂದಿನ ಮೈಸೂರು ಮಹಾರಾಜರಾದ ಚಾಮರಾಜೇಂದ್ರ ಅರಸರು ಮರಾಠಿ ಹಾಗೂ ಪಾರ್ಸಿ ನಾಟಕ ಮಂಡಳಿಗಳನ್ನು ಅರಮನೆಗೆ ಕರೆಯಿಸಿಕೊಂಡು 'ಸೌಭದ್ರ' ಹಾಗೂ 'ಶಾಕುಂತಲ' ನಾಟಕಗಳನ್ನು ಆಡಿಸಿದರು. ಹೀಗೆ ಮರಾಠಿ, ಉರ್ದು, ಸಂಸ್ಕೃತ ಇನ್ನೂ ಮುಂತಾದ ಭಾಷೆಗಳ ನಾಟಕಗಳ ಪ್ರದರ್ಶನಕ್ಕೆ ಮೈಸೂರು ಮಹಾರಾಜರು ಅವಕಾಶ ನೀಡಿದರು. ಹೀಗೆ ಹಳೆಯ ಮೈಸೂರಿನಲ್ಲಿ ವೃತ್ತಿ ನಾಟಕರಂಗ ಪ್ರಾರಂಭವಾಯಿತು.

ಮೈಸೂರಿನ ದೊರೆ ಚಾಮರಾಜೇಂದ್ರ ಒಡೆಯರ ಅಪ್ಪಣೆಯಂತೆ ಅರಮನೆಗೆ ಸೇರಿದ್ದ ರಾಯಲ್ ಪಾಠಶಾಲೆಯ ವಿದ್ಯಾರ್ಥಿಗಳಿಂದ ಮರಾಠಿ ಭಾಷೆಯ 'ಪ್ರಹ್ಲಾದ' ಹಾಗೂ ಇಂಗ್ಲೀಷ್ ಭಾಷೆಯ "ಫಿನಿ□□□□ ಅಪಾರ್ಟ್‌ಮೆಂಟ್ಸ್" ನಾಟಕವನ್ನು ಆಡಿಸಲಾಯಿತು. ಈ ನಾಟಕಗಳು ಎಲ್ಲರನ್ನೂ ರಂಜಿಸಿ ಉತ್ತಮ ಮನ್ನಣೆ ಪಡೆದವು. "ಈ ಎರಡು ನಾಟಕಗಳನ್ನು ನೋಡಿದ ದಿವಾನ್ ಸಿ. ರಂಗಾಚಾ□□□□ ಅವರಿಗೆ ಮೈಸೂರಿನಲ್ಲಿ ಹೊಸ ರಂಗಮಂಟಪವನ್ನು ರಚಿಸುವ ಆಸೆ ಮೂಡಿತು. ಮಹಾರಾಜರ ಅನುಮತಿಯಂತೆ, ದಿವಾನರು, ಆಸ್ಥಾನ ವಿದ್ವಾಂಸರು, ಕವಿಗಳೂ ಆಗಿದ್ದ ಬಸವಪ್ಪಶಾಸ್ತ್ರಿ, ಕವಿತಿಲಕ ಸೋಸಲೆ ಅಯ್ಯಾಶಾಸ್ತ್ರಿ, ನಂಜನಗೂಡು ಸುಬ್ಬಾಶಾಸ್ತ್ರಿ. ಜಯರಾಯಾಚಾರ್ಯ, ಚಂದ್ರಶೇಖರಶಾಸ್ತ್ರಿ

ಮೊದಲಾದವರನ್ನೂ ಬರಮಾಡಿಕೊಂಡು ಒಬ್ಬೊಬ್ಬರು ಒಂದೊಂದು ಕನ್ನಡ ನಾಟಕವನ್ನು ರಚಿಸಬೇಕೆಂದೂ ತಿಳಿಸಿದರು. ಇದರ ಫಲವಾಗಿಯೇ ಬಸವಪ್ಪಶಾಸ್ತ್ರಿ ಕಾಳಿದಾಸನ 'ಶಾಕುಂತಲ' ನಾಟಕವನ್ನು ಕನ್ನಡಕ್ಕೆ ಅನುವಾದಿಸಿದುದು"[4]. ಹೀಗೆ ರಚನೆಯಾದ ನಾಟಕಗಳನ್ನು 'ಶಾಕುಂತಲಾ ಕರ್ನಾಟಕ ನಾಟಕ ಸಭಾ ಮಂಡಳಿ' ಮೇಲ್ವಿಚಾರಣೆಯಲ್ಲಿ ಪ್ರದರ್ಶನಕ್ಕೆ ಸಿದ್ಧಪಡಿಸಿದರು. ಕಾಳಿದಾಸನ ಶಾಕುಂತಲಾ ನಾಟಕ ಕನ್ನಡದಲ್ಲಿ ಮೊದಲ ಬಾರಿಗೆ 1881ನೆಯ ನವೆಂಬರ್ ಹದಿನೇಳರಂದು ಅರಮನೆಯ ರಂಗಶಾಲೆಯಲ್ಲಿ ಪ್ರದರ್ಶಿತವಾಯಿತು. ಈ ನಾಟಕ ಅಪೂರ್ವವಾದ ಯಶಸ್ಸುಗಳಿಸಿತು. ಆ ನಂತರದಲ್ಲಿ ಮೈಸೂರು ಹಾಗೂ ಬೆಂಗಳೂರಿನಲ್ಲಿ ಸಾರ್ವಜನಿಕರ ಎದುರು 'ಶಾಕುಂತಲ' ನಾಟಕ ಪ್ರದರ್ಶನ ಕಂಡು ಅಭೂತಪೂರ್ವವಾದ ಯಶಸ್ಸು ಲಭಿಸಿತು. ಇಂಥಹ ನಾಟಕ ಕಂಪನಿ ಕಟ್ಟಿ ಬೆಳೆಸಿದ ಮಹಾಪೋಷಕರಾದ ಮಹಾರಾಜರಿಗೆ ಗೌರವ ಸಲ್ಲಿಸುವ ಸಲುವಾಗಿ 1882ರಲ್ಲಿ 'ಶಾಕುಂತಲ ಕರ್ನಾಟಕ ನಾಟಕ ಸಭಾ'ದ ಹೆಸರನ್ನು ಬದಲಿಸಿ "ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ" ಎಂದು ಮರುನಾಮಕರಣ ಮಾಡಿದರು.

'ಹೀಗೆ ಉತ್ತರ ಕರ್ನಾಟಕ ಭಾಗದಲ್ಲಿ 'ಶಾಂತಕವಿ'ಗಳು ಹಾಗೂ ಹಳೆಯ ಮೈಸೂರು ಭಾಗದಲ್ಲಿ ಶ್ರೀ ಚಾಮರಾಜೇಂದ್ರ ಮಹಾರಾಜರು ತೋರಿದ ಆಸಕ್ತಿಯಿಂದ ಕನ್ನಡ ವೃತ್ತಿ ರಂಗಭೂಮಿ ಗಟ್ಟಿಯಾಗಿ ನೆಲೆಯೂರಲು ಕಾರಣವಾಯಿತು. ನಂತರದಲ್ಲಿ ಹಲವಾರು ನಾಟಕ ಮಂಡಳಿಗಳು ಹುಟ್ಟಿ ಕನ್ನಡ ರಂಗಭೂಮಿಯ ಅಭಿವೃದ್ಧಿಗಾಗಿ ತಮ್ಮ ಅಳಿಲು ಸೇವೆ ಸಲ್ಲಿಸಿವೆ. ಅವುಗಳಲ್ಲಿ ಪ್ರಮುಖವಾದುವುಗಳೆಂದರೆ ಬೆಳಗಾವಿಯ ಹಲಸಗಿ ಮಂಡಳಿ, ಧಾರವಾಡದ 'ತಂತುಪುರಸ್ಥ ನಾಟಕ ಮಂಡಳಿ', 'ಹುಬ್ಬಳ್ಳಿಯ ಹಿಂದೂ ಯೂನಿಯನ್ ಕ್ಲಬ್', ಧಾರವಾಡದ 'ಭರತ ಕಲೋತ್ತೇಜಕ ಸಂಗೀತ ಸಮಾಜ', 'ಶಿರಹಟ್ಟಿ ನಾಟಕ ಮಂಡಳಿ, 'ಕೊಣ್ಣೂರಕರ್ ಕಾಡಸಿದ್ದೇಶ್ವರ ಸಂಗೀತ ನಾಟಕ ಮಂಡಳಿ', 'ವಿಶ್ವಗುಣಾದರ್ಶ ಮಂಡಳಿ', 'ಹಲಗೇರಿ ಕಂಪನಿ', 'ದತ್ತಾತ್ರೇಯ ಸಂಗೀತ ಮಂಡಳಿ,' 'ಜಯಕರ್ನಾಟಕ ನಾಟಕ ಮಂಡಳಿ,' 'ವಿಶ್ವರಂಜನ ನಾಟಕ ಮಂಡಳಿ,' 'ಶ್ರೀ ಕೃಷ್ಣ ನಾಟಕ ಕಂಪನಿ', 'ಶ್ರೀರಾಮ ಸೇವಾ ನಾಟ್ಯ ಸಂಸ್ಥೆ,' 'ವಾಣಿವಿಲಾಸ ನಾಟಕ ಮಂಡಳಿ', 'ಕೆ.ಬಿ.ಆರ್ ನಾಟಕ ಮಂಡಳಿ,' 'ಲಕ್ಷ್ಮೀಶ್ವರದ ಸ್ತ್ರೀ ನಾಟಕ ಮಂಡಳಿ' ಇನ್ನೂ ಮುಂತಾದ ಹತ್ತು ಹಲವು ನಾಟಕ ಕಂಪನಿಗಳು ಜನ್ಮತಾಳಿ ನೂರಾರು ನಾಟಕಗಳು ವಿಭಿನ್ನ ಪ್ರಯೋಗಗಳನ್ನು ಕನ್ನಡ ಸಹೃದಯರಿಗೆ ನೀಡಿವೆ. ಈ ನಾಟಕ ಕಂಪನಿಗಳು ಜನಪ್ರೀತಿಗಳಿಸಿಕೊಳ್ಳುವುದರ ಜೊತೆಗೆ ಅಪಾರವಾದ ಸಾಧನೆಯಿಂದ ರಂಗಭೂಮಿ ಇತಿಹಾಸದಲ್ಲಿ ತಮ್ಮದೇ ಆದ ಹೆಜ್ಜೆ ಗುರುತುಗಳನ್ನು ಮೂಡಿಸಿವೆ.

ಹೀಗೆ ಕನ್ನಡ ವೃತ್ತಿ ರಂಗಭೂಮಿಯ ಇತಿಹಾಸದ ಹೆಜ್ಜೆ ಗುರುತುಗಳನ್ನು ನೋಡುವಾಗ ಗುಬ್ಬಿ ವೀರಣ್ಣ ಅವರ 'ಗುಬ್ಬಿ ಚನ್ನಬಸವೇಶ್ವರ ಕೃಪಾ ಪೋಷಿತ ನಾಟಕ ಸಂಘ', 'ರತ್ನಾವಳೀ ನಾಟಕ ಥಿಯೇಟರ್ ಕಂಪನಿ', 'ಚಾಮುಂಡೇಶ್ವರಿ ನಾಟಕ ಸಭೆ', ಎಂ.ವಿ.ಸುಬ್ಬಯ್ಯನಾಯ್ಡು ಅವರ 'ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿ', 'ಹಿರಣ್ಣಯ್ಯ ಮಿತ್ರ ಮಂಡಳಿ' ಹಾಗೂ 'ದಕ್ಷಿಣ ಕನ್ನಡ ಜಿಲ್ಲೆಯ ವೃತ್ತಿ ರಂಗಭೂಮಿ ಮಂಡಳಿ'ಗಳ ಸಾಧನೆ ಸಿದ್ಧಿಗಳನ್ನು ಪ್ರಮುಖವಾಗಿ ಗಮನಿಸಬೇಕು. "ಕನ್ನಡ ನಾಡಿನ ಹಾಸ್ಯನಟರಲ್ಲಿ ಹೆಸರಾಂತ ಜಿ. ಹೆಚ್. ವೀರಣ್ಣನವರು ಆರು ವರ್ಷದ ಬಾಲಕನಾಗಿದ್ದಾಗ 1896ರಲ್ಲಿ ಗುಬ್ಬಿ ಕಂಪನಿ ಸೇರಿದರು. ಒಂದೇ ನಿಷ್ಠೆಯಿಂದ ಕೆಲಸಗಳನ್ನು ಮಾಡಿದುದಲ್ಲದೆ ಸಣ್ಣಪುಟ್ಟ ಪಾತ್ರಗಳಿಂದ ಪ್ರಾರಂಭಿಸಿ ಹಂತಹಂತವಾಗಿ ನಾಯಕನಟ, ನಿರ್ದೇಶಕ, ನಿರ್ಮಾಪಕರೂ ಆದರು. ದಣಿವರಿಯದ ದುಡಿಮೆಯಿಂದ ಪರಿಣಿತರಾದ ರೀತಿಯಲ್ಲಿ ಇವೆಲ್ಲ ಬಗೆಯ ಪಾತ್ರಗಳ ಅಭಿನಯ ಮಾಡಿದರು. ಆಡಳಿತದ ಆಂತರ್ಯವನ್ನು ಅರಿತರು, ವಿನಯಶೀಲತೆಯಿಂದ ಎಲ್ಲರಿಗೂ ಬೇಕಾದವರಾದರು. 1917ರಲ್ಲಿ ಮಂಡಳಿಯ ನೇತೃತ್ವವನ್ನೇ ವಹಿಸಿಕೊಂಡರು. ಅಲ್ಲಿಂದ ಸುಮಾರು ನಲವತ್ತು ವರುಷಗಳ ಕಾಲ ಗುಬ್ಬಿ ಕಂಪನಿಯನ್ನು ಯಶಸ್ಸಿನಿಂದ ಯಶಸ್ಸಿಗೆ ನಡೆಸಿದರು. ಇಂದಿಗೂ ಉಳಿದಿರುವ ಕಳೆದ ಶತಮಾನದ ಒಂದೇ ಮಂಡಳಿ ಎಂದರೆ ಗುಬ್ಬಿ ಕಂಪನಿ"[5]. ಗುಬ್ಬಿ ವೀರಣ್ಣ ಅವರು ರಂಗಭೂಮಿಯ ಬಗ್ಗೆ ಹೊಂದಿದ್ದ ದೂರದೃಷ್ಟಿ, ಆಡಳಿತ ಸಾಮರ್ಥ್ಯ, ಅಭಿನಯದ ಪರಿಣಿತಿಗಳಿಂದಾಗಿ ಕರ್ನಾಟಕದ ಬೇರೆ ಯಾವ ನಾಟಕ ಮಂಡಳಿಯೂ ಸಾಧಿಸಲಾರದ ಸಾಧನೆ ಮಾಡಿದ್ದಾರೆ. ಕಲೆಯನ್ನು ಮುಟ್ಟಿ ತಟ್ಟಿ, ಎಚ್ಚರಿಸಿ ಹಾಲೆರೆದು ಬೆಳೆಸಿ ರಂಗಕ್ಕೆ ಕಟ್ಟಿಹಾಕಿದ ಯಶಸ್ಸು ಗುಬ್ಬಿ ವೀರಣ್ಣನವರಿಗೆ ಸಲ್ಲಬೇಕು ಎಂದು ಹೇಳಿದ ಬೆಳ್ಳಾವೆ ನರಹರಿಶಾಸ್ತ್ರಿಗಳ ಮಾತಿನಲ್ಲಿ ಗುಬ್ಬಿ ವೀರಣ್ಣನವರಿಗೆ ರಂಗಭೂಮಿಯ ಅಭಿವೃದ್ಧಿಯ ಬಗ್ಗೆ ಎಂತಹ ಆಸಕ್ತಿ ಇತ್ತು ಎಂಬುದನ್ನು ತೋರಿಸುತ್ತದೆ.

ಮೈಸೂರು ನಾಟಕರಂಗದ ಅನಭಿಷಕ್ತ ಸಾಮ್ರಾಟರೆನಿಸಿಕೊಂಡ ಎ.ವಿ. ವರದಾಚಾರ್ಯರ 'ರತ್ನಾವಳೀ ಥಿಯೇಟರ್ ಕಂಪನಿ' 1904ರಲ್ಲಿ ಪ್ರಾರಂಭವಾಗಿ ನಂತರ ಇಪ್ಪತ್ತು ವರ್ಷಗಳ ಕಾಲ ಹಲವಾರು ಅತ್ಯುತ್ತಮ ನಾಟಕಗಳನ್ನು ನೀಡಿದೆ. ರತ್ನಾವಳಿ, ಶಾಕುಂತಲ, ನಿರುಪಮ, ಮನ್ಮಥ ವಿಜಯ, ವಿಷ್ಣುಲೀಲೆ ಮೊದಲಾದ ನಾಟಕಗಳು ಅಂದಿನ ಪ್ರೇಕ್ಷಕರನ್ನು ಸೆಳೆಯುವಲ್ಲಿ ಯಶ ಕಂಡಿವೆ. ಅಭಿನಯದ ಜೊತೆಗೆ ಉತ್ತಮ ಗಾಯಕರೂ ಆಗಿದ್ದ ವರದಾಚಾ□□□ರು ನಿರಂತರವಾಗಿ 20 ನಿಮಿಷಗಳ ಕಾಲ ಹಾಡಿದರೂ ಪ್ರೇಕ್ಷಕರು ಆಸಕ್ತಿಯಿಂದ ಕೇಳುತ್ತಿದ್ದರು. "ವರದಾಚಾ□□□ರ ನಾಟಕ ಮಂಡಳಿಯು ಪಂಡಿತ ಪಾಮರರಿಬ್ಬರಿಗೂ ಸಮೃದ್ಧವಾದ ಮನರಂಜನೆಯನ್ನು ನೀಡಿದೆ. ಮೈಸೂರಿನ ನಾಟಕ ರಂಗಕ್ಕೆ ವರದಾಚಾ□□□ರ ಕೊಡುಗೆ ಹಲವು ಬಗೆಯದು. ಅದರಲ್ಲಿ ಮುಖ್ಯವಾದುದೆಂದರೆ ರಂಗಸಂಗೀತದ ಸುಧಾರಣೆ. ಮರಾಠಿ ರಂಗದಿಂದ ಕಾಪಿ ಹೊಡೆದ ಮಟ್ಟುಗಳನ್ನು ಕಳಚಿ, ಕಂದ, ವೃತ್ತ ಗೀತೆಗಳನ್ನು ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಅಳವಡಿಸಿ. ಹೊಸ ರಂಗಸಂಗೀತದ ಪದ್ಧತಿಯನ್ನೇ ಅವರು ಪ್ರಾರಂಭಿಸಿದರು. ಅವರ ಶಾರೀರವೂ, ರಾಗಪರಿಜ್ಞಾನವೂ, ಭಾವ ಪ್ರತಿಪಾಲನೆಗಾಗಿ ಹಾಡುತ್ತಿದ್ದ ರೀತಿಯೂ ಅಸದೃಸ್ಯವಾದುದು. ವರದಾಚಾ□□□ರು ನಾಟಕದ ಚೌಕಟ್ಟನ್ನು ಸಡಿಲಿಸದೆಯೆ ಸಂಗೀತವನ್ನು ತಮ್ಮ ಕೈಯಾಳಿನಂತೆ ಇಟ್ಟುಕೊಂಡಿದ್ದರು".[6] ಹೀಗೆ ಹಾಡುವ ಇವರ ಶೈಲಿ ಮುಂದಿನವರಿಗೆ ಮಾರ್ಗದರ್ಶನವಾಯಿತು. ಒಟ್ಟಾರೆಯಾಗಿ ರಂಗಭೂಮಿಯ ಎಲ್ಲಾ ಮುಖಗಳನ್ನು ಅರಿತುಕೊಂಡು, ತಪ್ಪಾದಲ್ಲಿ ತಿದ್ದುತ್ತಾ ಬಂದವರೇ ವರದಾಚಾ□□□ರು. "ಕರ್ನಾಟಕದಲ್ಲಿ ನಾಟಕ ರಂಗ ಎಂಬುದೇ ಇಲ್ಲದೇ ಇದ್ದಾಗ ವರದಾಚಾ□□□ರು, ಕೃಷ್ಣಮೂರ್ತಿಗಳು ಅದಕ್ಕೊಂದು ನಾಟಕ ರಂಗವನ್ನು ರಚಿಸಿಕೊಟ್ಟರು. ಅಷ್ಟೇ ಅಲ್ಲ ಅದಕ್ಕೊಂದು ಉನ್ನತ ಸ್ಥಾನವನ್ನು ಗಳಿಸಿಕೊಟ್ಟರು. ಎಲ್ಲೋ ಒಂದೆಡೆ ಅವರು ನಿಲ್ಲಬೇಕಾಯಿತು, ನಿಂತರು." ಆ ದಿನದಿಂದ ಇಲ್ಲಿನವರೆಗೂ ಕರ್ನಾಟಕ ನಾಟಕ ರಂಗ ಸಾಕಷ್ಟು ಬೆಳೆದಿದೆ. ಹಾಗೆಯೇ ಆ ಬೆಳವಣಿಗೆಗೆ ವರದಾ□□□□□ರು ಕೊಡುಗೆ ಸಾಕಷ್ಟು ಕೊಡುಗೆ ನೀಡಿದ್ದಾರೆ.

ವರದಾಚಾ□□□ರಿಂದ ಸ್ಫೂರ್ತಿ ಪಡೆದು ಸುಬ್ಬಣ್ಣನವರ ನೇತೃತ್ವದಲ್ಲಿ ಶ್ರೀ ಚಾಮುಂಡೇಶ್ವರಿ ಪಳಗಿದೆ. ಕರ್ನಾಟಕ ನಾಟಕ ಸಭಾ' ಎಂಬ ಮಂಡಳಿ ಪ್ರಾರಂಭವಾಯಿತು. ಈ ಮಂಡಳಿಯಲ್ಲಿ ವರದಾಚಾ□□□ರ ಗರಡಿಯಲ್ಲಿ ನಾಗೇಂದ್ರರಾವ್, ಕೃಷ್ಣಮೂರ್ತಿರಾವ್, ಮರಿರಾಯರುಗಳಿದ್ದರು. 'ರಾಜಸೂಯಯಾಗ', 'ಭಕ್ತಪ್ರಹ್ಲಾದ', 'ದಾನ ಶೂರ ಕರ್ಣ', ಭೀಷ್ಮ ಪ್ರತಿಜ್ಞೆ', 'ವೀರ ಅಭಿಮನ್ಯು' ಮೊದಲಾದ ಪೌರಾಣಿಕ ನಾಟಕಗಳನ್ನು ಕನ್ನಡ ರಸಿಕರಿಗೆ ನೀಡಿದೆ. ಈ ಮಂಡಳಿಯ ನಾಟಕಗಳಲ್ಲಿ ಸೊಗಸಾದ ರಂಗಸಜ್ಜಿಕೆ ಹಾಗೂ ರಂಗಸಂಗೀತದ ಜೊತೆಗೆ ವಿದ್ಯುತ್ ದೀಪಗಳಿಂದ ವೇದಿಕೆಯು ಕಂಗೊಳಿಸುವಂತೆ ಮಾಡಿ ಜನಮನವನ್ನು ಸೂರೆಗೊಂಡಿತೆಂದರೆ ಅದು ಉತ್ತ್ರೇಕ್ಷೆಯಲ್ಲ. "ಸನ್ನಿವೇಶಗಳಿಗೆ ನಿಸರ್ಗ ಶೋಭಿತವಾದ ಛಾಯೆಗಳನ್ನು ಕೊಡುವುದರಲ್ಲಿ ಶ್ರೀ ಚಾಮುಂಡೇಶ್ವರಿಯರವನ್ನು ಮೀರಿಸಿದವರು ಕನ್ನಡ ನಾಡಿನೊಳಗಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಶೃಂಗವು ಕರ್ಣನ ತೊಡೆಯನ್ನು ಕೊರೆಯುವುದು, ವಿದುರನ ಮನೆಯಲ್ಲಿ ಹಾಲು ಉಕ್ಕುವುದು, ಕೃಷ್ಣನನ್ನು ಸೆರೆಹಿಡಿಯಲು ಬಂದಾಗ ನೂರಾರು ಕೃಷ್ಣರೂ ಕಾಣಿಸಿಕೊಳ್ಳುವುದು ಪ್ರೇಕ್ಷಣೀಯವಾಗಿದ್ದವು." ಇಂತಹ ವಿಭಿನ್ನವಾದ ದೃಶ್ಯ ಸಂಯೋಜನೆಗಳನ್ನು ಮಾಡುವುದರ ಮೂಲಕ ರಂಗಭೂಮಿಗೆ ಹೊಸತನವನ್ನು ತುಂಬುತ್ತಿದ್ದರು. ಆದರೂ ಕೆಲವೊಮ್ಮೆ ನಟರು ತಮ್ಮ ಅಭಿನಯವನ್ನು ಉತ್ತಮವಾಗಿ ಮಾಡಿದರೂ ಗಾಯನದಲ್ಲಿ ಯಶ ಕಾಣುತ್ತಿರಲಿಲ್ಲ. "ಇವರ ವಿಕೃತ ಅಂಗರಚನೆ, ಶೂನ್ಯ ಮುಖ ಭಂಗಿಯಿಂದ ಆಕರ್ಷಿತರಾಗದ ಪ್ರೇಕ್ಷಕರು ಕಣ್ಣು ಮುಚ್ಚಿಕೊಂಡು ಕುಳಿತು ಹಾಡುಗಳನ್ನು ಕೇಳಬೇಕಾಗುತ್ತಿತ್ತು" ಎಂಬ ಮಾತನ್ನು ಅಲ್ಲಗಳೆಯುವಂತಿಲ್ಲ. ಆದರೂ ಕನ್ನಡ ರಂಗಭೂಮಿಯನ್ನು ಬೆಳಗಿಸಿದ್ದು 'ಶ್ರೀ ಚಾಮುಂಡೇಶ್ವರಿ ಕರ್ನಾಟಕ ನಾಟಕ ಸಭಾ' ಮಂಡಳಿ ಎಂದು ನಿಸ್ಸಂಶಯವಾಗಿ ಹೇಳಬಹುದು.

## ಅಡಿಟಿಪ್ಪಣಿ

1. ಕರ್ನಾಟಕ ರಂಗಭೂಮಿ, ಡಾ.ಹೆಚ್.ಕೆ. ರಂಗನಾಥ್, ಪುಟ: 117
2. ಕರ್ನಾಟಕ ರಂಗಭೂಮಿ, ಡಾ.ಹೆಚ್.ಕೆ. ರಂಗನಾಥ್, ಪುಟ: 118
3. ಆಧುನಿಕ ಕನ್ನಡ ನಾಟಕ, ಕೆ.ಮರುಳ ಸಿದ್ದಪ್ಪ, ಪುಟ: 42
4. ಕರ್ನಾಟಕ ರಂಗಭೂಮಿ, ಡಾ.ಹೆಚ್.ಕೆ. ರಂಗನಾಥ್, ಪುಟ: 118
5. ಕರ್ನಾಟಕ ರಂಗಭೂಮಿ, ಡಾ.ಹೆಚ್.ಕೆ. ರಂಗನಾಥ್, ಪುಟ:165